ದಿನಾಂಕ 02-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಆರ್.ವಿ. ಎಸ್. ವಕೀಲರಿಂದಃ**

7. ಸ ನಂಃ 100/10 ರಲ್ಲಿ ತಿರಕಪ್ಪ ಯಲ್ಲಪ್ಪ ಇಂಗಳಕಿ ರವರ ಹೆಸರು ಸಹ ಜಂಟಿ ನಲ್ಲಿ ಇರುವುದರಿಂದ ಅವರನ್ನು ನಾನು ಸದರಿ ದಾವೆಯಲ್ಲಿ ಅವಶ್ಯಕ ಪಕ್ಷಕಾರರಾಗಿ ಮಾಡದೇ ಇರುವುದರಿಂದ ನಾನು ಸಲ್ಲಿಸಿರುವ ದಾವೆ ಕಾನೂನುಬದ್ಧವಾಗಿ ಇರುವುದಿಲ್ಲ ಎಂದರೆ ಒಟ್ಟು ನಮ್ಮ ತಾಯಿ ಹೆಸರು ಬರುತ್ತದೆ ಎನ್ನುತ್ತಾರೆ. ಸ ನಂಃ 100/22 1 ಮತ್ತು 2 ನೇ ಪ್ರತಿವಾದಿಗಳ ತಂದೆಯ ಆಸ್ತಿ ಆಗಿದ್ದರಿಂದ ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದರಲ್ಲಿ ನಮಗೂ ಸಹ ಹಿಸ್ಸೇ ಇದೆ ಎನ್ನುತ್ತಾರೆ. ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಿಸ್ಸೇ ಇಲ್ಲದೇ ಇದ್ದರೂ ಸಹ ಮಾನ್ಯ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸ ನಂಃ 150/1 ವಿಸ್ತೀರ್ಣ 2 ಎಕರೆ 1 ಗುಂಟೆ 1 ಮತ್ತು 2 ನೇ ಪ್ರತಿವಾದಿಗಳ ತಂದೆ ಪಕ್ಕೀರಪ್ಪರವರಿಗೆ ಟೆನೆಂಟ್ ಆಗಿ ಬಂದಿದ್ದು, ಅದರ ಬಗ್ಗೆ ದಾಖಲಾತಿಗಳ ಬಗ್ಗೆ ನನಗೆ ಅರಿವು ಇದ್ದರೂ ಸಹ, ಸದರಿ ದಾಖಲಾತಿಗಳನ್ನು ಮರೆಮಾಚಿ 1 ಮತ್ತು 2 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಸದರಿ ಆಸ್ತಿಯು ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿ ಇರುತ್ತದೆ ಎನ್ನುತ್ತಾರೆ. ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇಲ್ಲದೇ ಇದ್ದರೂ ಸಹ 1 ಮತ್ತು 2 ನೇ

ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ